ಅಸಲು ದಾವಾ ನಂಃ 46/2024
ಡಿ ಡಬ್ಲ್ಯುಃ2

<u>ದಿನಾಂಕಃ **02-04-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ವಿ. ವಕೀಲರಿಂದಃ</u>

ನಾನು ಪ್ರತಿವಾದಿ ಮಠದಲ್ಲಿ ಕೆಲಸ ಮಾಡುವ ಕಾಲಕ್ಕೆ ವಾದಿಯರ ತಂದೆ ಶಿವಲಿಂಗಪ್ಪ ರೈಟರ್ ಆಗಿ ಕೆಲಸ ಮಾಡುತ್ತಿದ್ದರು. ಶಿವಲಿಂಗಪ್ಪ ನವರು ಮೂಲತಃ ಯಾವ ಊರಿನವರು ಎಂದು ನನಗೆ ಗೊತ್ತಿರುವುದಿಲ್ಲ. ಶಿವಲಿಂಗಪ್ಪ ಮಾತ್ರ ನಮ್ಮ ಮಠದಲ್ಲಿ ಕೆಲಸ ಮಾಡುತ್ತಿದ್ದರು. ರೈಟರ್ ಎಂದರೆ ಕೂಲಿಯಾಳುಗಳ ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಕೆಲಸ ಇರುತ್ತದೆ ಎಂದರೆ ಸರಿ. ಶಿವಲಿಂಗಪ್ಪನವರು ನಮ್ಮ ಮಠದಲ್ಲಿ ವಾಸವಿರಲಿಲ್ಲ ಅವರು ಪ್ರತ್ಯೇಕವಾಗಿ ವಾಸ ಇದ್ದರು. ಶಿವಲಿಂಗಪ್ಪನವರು ಎಲ್ಲಿ ಪ್ರತ್ಯೇಕವಾಗಿ ವಾಸವಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಮಠದವರು ಜಮೀನಿನ ವಿಚಾರವಾಗಿ ಶಿವಲಿಂಗಪ್ಪ ಇವರಿಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಶಿವಲಿಂಗಪ್ಪ ಇವರು ರೈಟರ್ ಆಗಿ ಕೆಲಸ ಮಾಡುವುದನ್ನು ಬಿಟ್ಟು ಬೇರೆ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಶಿವಲಿಂಗಪ್ಪ ಇವರು ರೈಟರ್ ಕೆಲಸ ಬಿಟ್ಟು ಬೇರೆ ಕೆಲಸ ಮಾಡಬಾರದು ಎಂಬ ಬಗ್ಗೆ ಯಾವುದೇ ಬರವಣಿಗೆ-ಷರತ್ತುಗಳು ಆಗಿರುವುದಿಲ್ಲ.

2. ಸರ್ವೆ ನಂಬರ್ 27 ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ರಂಭಾಪುರಿ ಮಠದಲ್ಲಿ ಎಲ್ಲಾ ವ್ಯವಹಾರಗಳ ಸಂಪೂರ್ಣ ಜವಾಬ್ದಾರಿಯನ್ನು ಮಠಾಧಿಪತಿಗಳೇ ನೋಡಿಕೊಳ್ಳುತ್ತಾರೆ ಎಂದರೆ ಸರಿ. ಮಠಕ್ಕೆ ಸಂಬಂಧಿಸಿದ ಆಸ್ತಿಗಳ ಬಗ್ಗೆ ನಾವು ರಿಜಿಸ್ಟರ್ ಗಳನ್ನು ಇಟ್ಟಿರುತ್ತೇವೆ ಎಂದರೆ ಸರಿ. ನಮ್ಮ ಮಠದ ಆಸ್ತಿಗಳು ಎಲ್ಲೆಲ್ಲಿ ಇರುತ್ತವೆ ಎಂಬ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ. ನಾನು ಮಠಕ್ಕೆ ಸಂಬಂಧಿಸಿದ ಆಸ್ತಿಗಳ ಬಗ್ಗೆ ದಾಖಲೆ ತಃಖ್ತೆಯನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ನಾನು ಆವಾಗವಾಗ ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಸರ್ವೆ ನಂಬರ್ 27 ಕ್ಕೆ ಸಂಬಂಧಪಟ್ಟಂತೆ ನಮ್ಮ ಮಠದ ದಾಖಲೆಯ ತಃಖ್ತೆಯನ್ನು ನೋಡಿರುತ್ತೇನೆ. ಸರ್ವೆ ನಂಬರ್ 27 ನಮ್ಮ ಮಠದ ಸ್ವಾಧೀನದಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಬರ್ 27 ಮೂಲತಃ ಸರ್ಕಾರಿ ಸರ್ವೆ ನಂಬರ್ ಎಂದರೆ ಸರಿ.

ಸರ್ವೆ ನಂಬರ್ 27 ರಲ್ಲಿ ನಮ್ಮ ಮಠಕ್ಕೆ ಯಾವುದೇ ಜಮೀನು ಮಂಜೂರು ಆಗಿರುವುದಿಲ್ಲ.

3. ದಾವಾ ಸ್ವತ್ತು ಸಂಪೂರ್ಣ 5 ಎಕ್ರೆ 4 ಗುಂಟೆ ನಮ್ಮ ಮಠದ ಸ್ವಾಧೀನದಲ್ಲಿ ಇರುತ್ತದೆ. ಸದರಿ ದಾವಾ ಸ್ವತ್ತಿನ ವಿಸ್ತೀರ್ಣದ ಪೈಕಿ 6 ಗುಂಟೆ ಖರಾಬು ಜಮಿೀನು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಸರ್ವೆ ನಂಬರ್ 169 ನಮ್ಮ ಮಠದ ಆಸ್ತಿ ಬರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸುತ್ತಲೂ ನಮ್ಮ ಮಠದ ಆಸ್ತಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ಕಾಫಿ ಬೆಳೆಯನ್ನು ಬೆಳೆಯಲಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಸರ್ಕಾರಿ ಜಮಿೀನು ಬರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಒಂದು ದಿಕ್ಕಿನಲ್ಲಿ ರಸ್ತೆ ಇದ್ದು ಅದು ಯಾವ ದಿಕ್ಕಿನಲ್ಲಿ ಇರುತ್ತದೆ ಎಂದು ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ದಕ್ಷಿಣ ಭಾಗದಲ್ಲಿ ಸ.ನಂಬರ್ 110 ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ.

4. ಸರ್ವೆ ನಂಬರ್ 110 ರಲ್ಲಿ ನಮ್ಮ ಮಠಕ್ಕೆ ಸಂಬಂಧಿಸಿದ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ನಮ್ಮ ಮಠಕ್ಕೆ ಯಾವ ರೀತಿ ಬಂದಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ದಾಖಲೆ ನೋಡುತ್ತೇನೆ. ದಾವಾ ಆಸ್ತಿ ಶಿವಲಿಂಗಪ್ಪ ಇವರಿಗೆ 2024 ರಲ್ಲಿ ಅವರು ತಪ್ಪೊಪ್ಪಿಗೆ ಬರೆದುಕೊಡುವಾಗ ಆಸ್ತಿ ಮಂಜೂರು ಆಗಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ತಪ್ಪೊಪ್ಪಿಗೆಯಲ್ಲಿ ಶಿವಲಿಂಗಪ್ಪ ಇವರು ಮಠದ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುವುದು ತಪ್ಪು ಎಂದು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ತಪ್ಪೊಪ್ಪಿಗೆ ಪತ್ರವನ್ನು ಯಾವ ದಿನಾಂಕ ಮತ್ತು ತಿಂಗಳು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಸರಿಯಾಗಿ ನೆನಪಿರುವುದಿಲ್ಲ. ಸದರಿ ತಪ್ಪೊಪ್ಪಿಗೆ ಪತ್ರದಲ್ಲಿ ದಿನಾಂಕ, ತಿಂಗಳು ಮತ್ತು ವರ್ಷವನ್ನು ನಮೂದು ಮಾಡಿರುತ್ತಾರೆ. ಶಿವಲಿಂಗಪ್ಪ ಇವರು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುವ ವಿಚಾರ ಈ ದಾವೆಯಲ್ಲಿ ತಕರಾರು ಸಲ್ಲಿಸುವ ಕಾಲಕ್ಕೆ ನಮಗೆ ಗೊತ್ತಿತ್ತು. ತಪ್ಪೊಪ್ಪಿಗೆ ಪತ್ರವನ್ನು ಶಿವಲಿಂಗಪ್ಪ ಇವರು ಬರವಣಿಗೆ ಮಾಡಿರುತ್ತಾರೆ. ಸಾಕ್ಷಿ

ಮುಂದುವರೆದು ಸಹಿ ಮಾಡಿರುತ್ತಾರೆ ಅವರು ಹೇಳಿ ಬರೆಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

5. ತಪ್ಪೊಪ್ಪಿಗೆ ಪತ್ರ ಬರೆದುಕೊಡುವ ಕಾಲಕ್ಕೆ ನಾನು ಹಾಜರು ಇರಲಿಲ್ಲ. ಈ ರೀತಿ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುವ ವಿಚಾರವನ್ನು ನಮ್ಮ ಸಿಬ್ಬಂದಿಯಾದ ಚಂದ್ರಶೇಖರ್ ರವರು ಹೇಳಿರುತ್ತಾರೆ. ಸದರಿ ಚಂದ್ರಶೇಖರ್ ರವರು ಈಗ ಮೇನೇಜರ್ ಆಗಿ ಕೆಲಸ ಮಾಡುತ್ತಿರುತ್ತಾರೆ. ಶಿವಲಿಂಗಪ್ಪ ಇವರು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟ ನಂತರ ನಾನು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ತೆಗೆದು ಪರಿಶೀಲನೆ ಮಾಡಿರುವುದಿಲ್ಲ. ಸಾಗುವಳಿ ಚೀಟಿಯನ್ನು ರದ್ದುಪಡಿಸಬೇಕು ಎಂದು ನಾವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸ್ವಾ ಧೀನದಲ್ಲಿರುವ ಕಾರಣ ಆ ರೀತಿ ಕ್ರಮ ಕೈಗೊಂಡಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-1 ರಂತೆ ಶಿವಲಿಂಗಪ್ಪ ಇವರಿಗೆ ಗ್ರಾಂಟ್ ಸರ್ಟಿಫೀಕೇಟ್ ನೀಡಿರುತ್ತಾರೆ ಎಂದರೆ ಸರಿ. ಸದರಿ ಗ್ರಾಂಟ್ ಸರ್ಟಿಫೀಕೇಟ್ ಆಧಾರದ ಮೇಲೆ ಶಿವಲಿಂಗಪ್ಪ ಇವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಅದು ಪೋರ್ಜರಿ ಎಂದು ಉತ್ತರಿಸಿರುತ್ತಾರೆ. ನಾವು ಆಸ್ತಿಯ ಸ್ವಾಧೀನದಲ್ಲಿಇರುವ ಬಗ್ಗೆ ಸರ್ಕಾರಕ್ಕೆ ಯಾವುದೇ ಕಂದಾಯ ಕಟ್ಟಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಕಲಂ ನಂಬರ್ 9 ಪಹಣಿ ಪತ್ರಿಕೆಯಲ್ಲಿ ವಾದಿಯರ ಹೆಸರು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

6. ಶಿವಲಿಂಗಪ್ಪನವರು ಯಾವ ಊರಿನಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಶಿವಲಿಂಗಪ್ಪ ಇವರಿಗೆ ಕಮಲಮ್ಮ ಎಂಬ ಹೆಂಡತಿ ಇದ್ದರು ಎಂದರೆ ನನಗೆ ಅವರ ಕುಟುಂಬದ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ವಾದಿಯರು ಮೃತ ಶಿವಲಿಂಗಪ್ಪ ಇವರ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ ಈ ದಾವೆ ಹೂಡಿದ ನಂತರ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಬಗರ್ ಹುಕುಂ ನಲ್ಲಿ ದಾವಾ ಮಂಜೂರಾಗುವ ಪೂರ್ವದಲ್ಲಿ ಸ್ಕೆಚ್ ಅನ್ನು ತಯಾರಿಸಲಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ ಶಿವಲಿಂಗಪ್ಪ ಇವರು ಸ್ವಾ ಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಮಠದ ಆಸ್ತಿಗೆ ಒಳಪಟ್ಟಿರುವುದಿಲ್ಲ ಎಂದರೆ ಸಾಕ್ಷಿ ಅದು ನಮ್ಮ

ಮಠದ ಆಸ್ತಿಯ ಒಳಗೆ ಬರುತ್ತದೆ ಎಂದು ಉತ್ತರಿಸಿರುತ್ತಾರೆ. ವಾದಿಯರ ತಂದೆ ದಾವಾ ಆಸ್ತಿಯನ್ನು ಸಾಗುವಳಿ ಮಾಡುವ ವಿಚಾರ ಮಠಾಧಿಪತಿಗೆ ಹಾಗೂ ನನ್ನ ಸಿಬ್ಬಂದಿಯವರಿಗೂ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸುತ್ತಲೂ ಬೇಲಿ ಇರುತ್ತದೆ ಎಂದರೆ ಸಾಕ್ಷಿ ನಮ್ಮ ಮಠದ ಆಸ್ತಿಯ ಸುತ್ತಲೂ ಒಂದೇ ಬೇಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ವಾದಿಯರು ನಮ್ಮ ಸ್ವಾಧೀನಕ್ಕೆ ಯಾವ ದಿನಾಂಕದಂದು ಬಂದು ತೊಂದರೆ ಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರು ದಾವಾ ಆಸ್ತಿಯನ್ನು ತಮ್ಮ ಸ್ವಾಧೀನಕ್ಕೆ ಬಿಟ್ಟು ಕೊಡಬೇಕೆಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯರು ಕಂದಾಯ ಕಟ್ಟುತ್ತಾ ಇರುತ್ತಾರೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ನಮ್ಮ ಮತ್ತು ಶಿವಲಿಂಗಪ್ಪನವರ ನಡುವೆ ಯಾವುದೇ ದೂರು ದಾಖಲಾಗಿರುವುದಿಲ್ಲ. ಶಿವಲಿಂಗಪ್ಪ ಇವರ ಜೀವಿತಾವಧಿಯಲ್ಲಿ ಅವರಿಗೆ ಬೆದರಿಸಿ ಮೂಲ ಗ್ರಾಂಟ್ ಸರ್ಟಿಫಿಕೇಟನ್ನು ನಮ್ಮ ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಶಿವಲಿಂಗಪ್ಪ ಇವರು ನಮ್ಮ ಮಠಕ್ಕೆ ಹಾಗೂ ನಮ್ಮ ಮಠದವರು ಶಿವಲಿಂಗಪ್ಪ ಇವರಿಗೆ ಯಾವುದೇ ಹಣ ಕೊಡುವುದು ಬಾಕಿ ಇರುವುದಿಲ್ಲ.

7. ಶಿವಲಿಂಗಪ್ಪನವರು ತಮ್ಮ ಸ್ವಾಧೀನದಲ್ಲಿರುವ ಸ್ಥಳಕ್ಕೆ ಅರ್ಜಿ ಕೊಟ್ಟು ಸರ್ಕಾರದವರು ಸ್ಥಳ ತನಿಖೆ ಮಾಡಿ ಸದರಿ ದಾವಾ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿ ಫೋರ್ಜರಿ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾವು ವಾದಿಯಿಂದ ಅಕ್ರಮವಾಗಿ ಸ್ವಾಧೀನಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಈ ದಾವೆಗೋಸ್ಕರ ತಪ್ಪೊಪ್ಪಿಗೆ ಪತ್ರವನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-3 ರಲ್ಲಿ ಸಹಿ ಮಾಡಿರುವವರು ನಮ್ಮ ಮಠದ ಸಿಬ್ಬಂದಿಯವರು ಇರುತ್ತಾರೆ ಎಂದರೆ ಸರಿ. ವಾದಿಯವರೇ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರು ಇದ್ದು ನಾವು ಅಕ್ರಮ ಸ್ವಾಧೀನ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ದಿಃ 10.09.2024 ರಂದು ವಾದಿಯರು ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರು ಹಾಜರು ಪಡಿಸಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

ಅಸಲು ದಾವಾ ನಂಃ 46/2024
ಡಿ ಡಬ್ಲ್ಯುಃ2

<u>ಮರು ವಿಚಾರಣೆಃ  ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-

**ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,**
**ಸಂಚಾರಿ ನ್ಯಾಯಾಲಯ, ಕೊಪ್ಪ.**

ಸಾಕ್ಷಿದಾರರ ಸಹಿಃ